ಸಿ.ಸಿ. ಸಂಖ್ಯೆ **11100/2022**
ಡಿ ಡಬ್ಲ್ಯೂ- **1**

ದಿಃ **05.06.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತ್ತು

ಮುಂದುವರಿದ ಪಾಟೀ ಸವಾಲುಃ ಪಿರ್ಯಾದುದಾರರ **ಪರ ಶ್ರೀ ಬಿ ಕೆ ಪಿ ಎಸ್ ವಕೀಲ**ರಿಂದಃ

ನಾನು ಸಿದ್ದಲಿಂಗಮ್ಮರವರ ವಿರುದ್ದ ಪೊಲೀಸ್ ಠಾಣೆಗೆ ದೂರನ್ನು ನೀಡಿದೆನು ಎಂದು ಹೇಳುವ ದಾಖಲೆಯನ್ನು ನಾನು ಇಂದು ನ್ಯಾಯಾಲಯಕ್ಕೆ ತಂದಿರುವುದಿಲ್ಲ. ಸದರಿ ದಾಖಲೆಯನ್ನು ಇಂದು ನ್ಯಾಯಾಲಯಕ್ಕೆ ತರಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ನೀಡಿದ ದೂರು ಹಾಗೂ ಪೊಲೀಸರು ನೀಡಿದ ಹಿಂಬರಹವನ್ನು ನಾನು ಮನೆಗೆ ಹೋಗಿ ಪರಿಶೀಲಿಸಿರುತ್ತೇನೆ. ಪೊಲೀಸರು ನೀಡಿದರು ಎಂದು ಹೇಳುವ ಹಿಂಬರಹದ ದಿನಾಂಕ ನನಗೆ ನೆನಪಿಲ್ಲ.

ನಿಡಿ-5 ರಿಂದ 7 ರ ದಾಖಲೆಗಳನ್ನು ನನ್ನ ವಕೀಲರು ನನಗೆ ಕೊಡಿಸಿದರು. ನಿಡಿ-7 ಮತ್ತು 8 ರ ದಾಖಲೆಗಳ ದೃಡೀಕೃತ ನಕಲುಗಳನ್ನು ಯಾರು ಪಡೆದರು ಎಂಬ ಬಗ್ಗೆ ನಿಡಿ-7 ಮತ್ತು 8 ರಲ್ಲಿ ಯಾವುದೇ ವಿವರಗಳು ಇರುವುದಿಲ್ಲ. ನಿಡಿ-7 ಮತ್ತು 8 ರ ದಾಖಲೆಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲೆಗಳು ನನ್ನ ವಕೀಲರಿಗೆ ಸಂಬಂದಪಟ್ಟ ದಾಖಲೆಗಳು ಎಂದು ನುಡಿಯುತ್ತಾರೆ. ನಿಡಿ-7 ಮತ್ತು 8 ರ ಪ್ರಕರಣದಲ್ಲಿ ಈ ಪ್ರಕರಣದ ಚೆಕ್ ಬಗ್ಗೆ ಎಲ್ಲಿಯೂ ಸಹ ನಮೂದು ಇರುವುದಿಲ್ಲ ಎಂದರೆ ಸರಿ.

ಸ್ವಾಮಿ ಎಂಬುವವರೊಂದಿಗೆ ಮಾತ್ರ ನನ್ನ ವ್ಯವಹಾರ ನಡೆದಿದ್ದು ಈ ಪ್ರಕರಣದ ಪಿರ್ಯಾದುದಾರರು ಹಾಗೂ ನನ್ನ ನಡುವೆ ಯಾವುದೇ

ವ್ಯವಹಾರ ನಡೆದಿಲ್ಲವೆಂದು ನಾನು ಪಿರ್ಯಾದುದಾರರ ವಿರುದ್ದ ಪೊಲೀಸರಿಗೆ ಯಾವುದೆ ದೂರನ್ನು ನೀಡಿರುವುದಿಲ್ಲ. ಸಿದ್ದಲಿಂಗಮ್ಮ ರವರಿಗೆ ನೀಡಿದೆನು ಎಂದು ಹೇಳುವ ಚೆಕ್ ನ್ನು ಈ ಪ್ರಕರಣದ ಪಿರ್ಯಾದುದಾರರು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣವನ್ನು ಹೂಡಿದ್ದಾರೆ ಎಂದು ಪೊಲೀಸರಿಗೆ ಪಿರ್ಯಾದುದಾರರ ವಿರುದ್ದ ನಾನು ಯಾವುದೇ ದೂರನ್ನು  ನೀಡಿರುವುದಿಲ್ಲ. ಪಿರ್ಯಾದುದಾರರು ಹಾಗೂ ನನ್ನ ನಡುವೆ ಹಣಕಾಸಿನ ವ್ಯವಹಾರ ನಡೆದ ಕಾರಣವೆ ನಾನು ಪಿರ್ಯಾದುದಾರರ ವಿರುದ್ದ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರಿಂದ ನಾನು ಪಡೆದ ಹಣವನ್ನು ಹಿಂತಿರುಗಿಸದೆ ಲಪಟಾಯಿಸಬೇಕೆಂಬ ಉದ್ದೇಶದಿಂದ ಈ ಪ್ರಕರಣಕ್ಕೆ ಸಂಬಂದಪಡದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-1 ರಿಂದ 20 ರ ದಾಖಲೆಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದ 4 ನೇ ಪುಟದ 14 ಮತ್ತು 15 ನೇ ಕಂಡಿಕೆಯಲ್ಲಿ ತಿಳಿಸಿರುವ ಅಸಲು ದಾವೆ ಸಂಖ್ಯೆ 99/2022 ಹಾಗೂ ಇತರೆ ಸಿವಿಲ್ ದಾವೆಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದ 16 ನೇ ಕಂಡಿಕೆಯಲ್ಲಿ ರೂ.15 ಲಕ್ಷದ ವಿಮೆಯ ಬಗ್ಗೆ ಬರೆದಿದ್ದು ಅದಕ್ಕೆ ಸಂಬಂದಪಟ್ಟ ದಾಖಲೆಗಳನ್ನು ನಾನು ವೈಯಕ್ತಿಕವಾಗಿ ಪರಿಶೀಲಿಸಿರುವುದಿಲ್ಲ. ಸಿದ್ದಲಿಂಗಮ್ಮ ರವರಿಗೆ ರೂ. 15 ಲಕ್ಷ ಹಣವು ವಿಮೆಯ ಮೂಲಕ ಬಂದಿತ್ತು ಎಂದು ತೋರಿಸಲು ನಾನು ಈ ಪ್ರಕರಣದಲ್ಲಿ ಯಾವುದೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದ 16 ನೇ ಕಂಡಿಕೆಯಲ್ಲಿ ತಿಳಿಸಿರುವಂತೆ ಸಿದ್ದಲಿಂಗಮ್ಮರವರಿಗೆ ಬಂದ ವಿಮೆಯ ಹಣದಲ್ಲಿ ಅರ್ಧ ಭಾಗವನ್ನು

ಪಿರ್ಯಾದುದಾರರಿಗೆ ನಾನು ಕೊಡಿಸದ ಕಾರಣ ಪಿರ್ಯಾದುದಾರರು ಹಾಗೂ ನನ್ನ ಮಧ್ಯೆ ವೈಶಮ್ಯ ಮೂಡಿದ್ದು ಎಂದು ತೋರಿಸಲು ನಾನು ಈ ಪ್ರಕರಣದಲ್ಲಿ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು 2022 ರ ಸೆಪ್ಟೆಂಬರ್ ಮಾಹೆಯ ಮುಂಚಿತವಾಗಿ ಸದರಿ ವಿಚಾರಕ್ಕೆ ಸಂಬಂದಪಟ್ಟಂತೆ ಪಿರ್ಯಾದುದಾರರು ಹಾಗೂ ನನ್ನ ಮಧ್ಯೆ ದೂರವಾಣಿ ಮೂಲಕ ಮಾತುಕತೆ ನಡೆದಿತ್ತು ಎಂದು ನುಡಿಯುತ್ತಾರೆ. ಪಿರ್ಯಾದುದಾರರ ದೂರವಾಣಿ ಸಂಖ್ಯೆ ನನಗೆ ನೆನಪಿಲ್ಲ. ಪಿರ್ಯಾದುದಾರರು ದೂರವಾಣಿ ಕರೆ ಮಾಡಿದರು ಹಾಗೂ ಅವರ ದೂರವಾಣಿ ಸಂಖ್ಯೆಯ ಬಗ್ಗೆ ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಬರೆದು ತಿಳಿಸಿರುವುದಿಲ್ಲ. ಸದರಿ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಯಿರಿ ಎಂದು ನಾನು ನನ್ನ ವಕೀಲರೊಂದಿಗೆ ಚರ್ಚಿಸಿದ್ದೆನು. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರವನ್ನು ಬರೆದಾಗ ಅದರಲ್ಲಿ ಸದರಿ ದೂರವಾಣಿ ಕರೆಯ ವಿಚಾರ ಬರೆದಿತ್ತು. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ಓದಿ ತಿಳಿದುಕೊಂಡ ನಂತರವೆ ನಾನು ಅದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ.

ಪಿರ್ಯಾದುದಾರರು ಸಿದ್ದಲಿಂಗಮ್ಮರವರೊಂದಿಗೆ ಶಾಮೀಲಾಗಿ ಚೆಕ್ ನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ನಾನು ನೀಡಿದ ನಿಪಿ-6 ರ ಪ್ರತ್ಯುತ್ತರ ನೋಟೀಸಿನ 3 ನೇ ಪುಟದಲ್ಲಿ ಬರೆಸಿದ್ದೇನೆ. ನಿಪಿ-3 ರ ತಿಳುವಳಿಕೆ ಪತ್ರ ತಲುಪಿದ ದಿನದಿಂದ ನಿಪಿ-6 ರ ಪ್ರತ್ಯುತ್ತರ ನೋಟಿಸ್ ನ್ನು ಕಳುಹಿಸಿದ ದಿನದ ಮಧ್ಯೆ ನಾನು ಸಿದ್ದಲಿಂಗಮ್ಮರವರೊಂದಿಗೆ ದೂರವಾಣಿ ಮೂಲಕ ಮಾತನಾಡಿರುತ್ತೇನೆ. ನಿಪಿ-3 ರ ನೋಟಿಸ್ ತಲುಪಿದ ತಕ್ಷಣ ನಾನು ಸಿದ್ದಲಿಂಗಮ್ಮರವರೊಂದಿಗೆ ಮಾತನಾಡಿದೆನು. ಸಾಕ್ಷಿಯು ಮುಂದುವರಿದು ನಾನು ನೀಡಿದ ಹಣವನ್ನು ಸಿದ್ದಲಿಂಗಮ್ಮ ಮತ್ತು ಪಿರ್ಯಾದುದಾರರು

ಹಂಚಿಕೊಂಡ ಬಗ್ಗೆ ಸಿದ್ದಲಿಂಗಮ್ಮ ರವರು ನನಗೆ ದೂರವಾಣಿ ಮೂಲಕ ತಿಳಿಸಿದರು ಎಂದು ನುಡಿಯುತ್ತಾರೆ. ಸಿದ್ದಲಿಂಗಮ್ಮ ಮತ್ತು ಪಿರ್ಯಾದುದಾರರು ಪರಸ್ಪರ ಎಷ್ಟು ಹಣವನ್ನು ಹಂಚಿಕೊಂಡರು ಎಂಬುದು ನನಗೆ ಗೊತ್ತಿಲ್ಲ. ಸಿದ್ದಲಿಂಗಮ್ಮ ಮತ್ತು ಪಿರ್ಯಾದುದಾರರು ಎಷ್ಟೆಷ್ಟು ಹಣವನ್ನು ಹಂಚಿಕೊಂಡರು ಎಂಬ ಬಗ್ಗೆ ಸಿದ್ದಲಿಂಗಮ್ಮ ರವರು ನನಗೆ ತಿಳಿಸಲಿಲ್ಲ. ಸದರಿ ವಿಚಾರವನ್ನು ನನ್ನ ಪ್ರತ್ಯುತ್ತರ ನೋಟಿಸ್ ಮತ್ತು ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಬರೆದು ತಿಳಿಸಲು ನನಗೆ ತೊಂದರೆ ಇರಲಿಲ್ಲ .

ಸಿದ್ದಲಿಂಗಮ್ಮ ಮತ್ತು ಪಿರ್ಯಾದುದಾರರ ವಿರುದ್ದ ಐಪಿಸಿ ಕಲಂ 420 ರ ಅಡಿಯಲ್ಲಿ ದೂರನ್ನು ದಾಖಲಿಸುತ್ತೇನೆ ಎಂದು ನಾನು ನನ್ನ ಪ್ರತ್ಯುತ್ತರ ನೋಟೀಸಿನಲ್ಲಿ ತಿಳಿಸಿರುತ್ತೇನೆ. ಸಿದ್ದಲಬಿಂಗಮ್ಮ ಮತ್ತು ಪಿರ್ಯಾದುದಾರರ ವಿರುದ್ದ ನಾನು ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಐಪಿಸಿ ಕಲಂ 420 ರ ಅಡಿಯಲ್ಲಿ ದೂರನ್ನು ನೀಡಿರುತ್ತೇನೆ. ನಾನು ನೀಡಿದೆನು ಎಂದು ಹೇಳುವ ದೂರಿಗೆ ಸಂಬಂದಪಟ್ಟ ಪ್ರಕಣದ ಸಂಖ್ಯೆ ನನಗೆ ನೆನಪಿಲ್ಲ. ಸದರಿ ದೂರನ್ನು ದಾಖಲಿಸಿಕೊಂಡ ನಂತರ ಕಾನೂನಿನ ಪ್ರಕಾರ ಪ್ರ.ವ.ವರದಿಯ ಉಚಿತ ಪ್ರತಿಯನ್ನು ತೋರಿಸಲು ನನಗೆ ನೀಡಿರುವುದಿಲ್ಲ. ನಾನು ನೀಡಿದ ದೂರಿಗೆ ಸಂಬಂದಪಟ್ಟಂತೆ ಪ್ರ.ವ.ವರದಿಯನ್ನು ನೀಡಿ ಎಂದು ನಾನು ಹಲವಾರು ಬಾರಿ ಪೊಲೀಸರನ್ನು ಕೇಳಿಕೊಂಡೆನು ಆದರೆ ಅದರ ಪ್ರತಿಯನ್ನು ಪೊಲೀಸರು ನನಗೆ ನೀಡಲಿಲ್ಲ. ಪೊಲೀಸರು ನನ್ನ ಕೋರಿಕೆಗೆ ಸರಿಯಾಗಿ ಸ್ಪಂದಿಸದ ಕಾರಣ ಸದರಿ ಪೊಲೀಸರ ಮೇಲಾಧಿಕಾರಿಗಳಿಗೆ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಸದರಿ ಪೊಲೀಸ್ ಮೇಲಾಧಿಕಾರಿಗಳಿಗೆ ದೂರನ್ನು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ನೀಡಿದ ದೂರಿಗೆ ಸಂಬಂದಪಟ್ಟಂತೆ ಪೊಲೀಸರು ಸರಿಯಾಗಿ ಸ್ಪಂದಿಸುತ್ತಿಲ್ಲವೆಂದು ನಾನು ನನ್ನ ವಕೀಲರಗೆ ತಿಳಿಸಿದೆನು.

ನಂತರ ನಾನು ಮತ್ತು ನನ್ನ ವಕೀಲರು ಹೋಗಿ ದೂರು ಹಾಗೂ ಪ್ರ.ವ.ವರದಿಯ ನಕಲುಗಳನ್ನು ನೀಡಿ ಎಂದು ಕೇಳಲಿಲ್ಲ. ನಾನು ನೀಡಿದೆನು ಎಂದು ಹೇಳುವ ದೂರಿನ ಆಧಾರದ ಮೇಲೆ ಪೊಲೀಸರು ಸಿದ್ದಲಿಂಗಮ್ಮ ಮತ್ತು ಪಿರ್ಯಾದುದಾರರ ವಿರುದ್ದ ಏನು ಕ್ರಮ ಕೈಗೊಂಡರು ಎಂಬ ಬಗ್ಗೆ ನಾನು ವಿಚಾರಿಸಲಿಲ್ಲ. ನಾನು ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗಿ ಯಾವುದೇ ದೂರನ್ನು ನೀಡದಿದ್ದರೂ ಸಹ ನೀಡಿದೆನು ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಜವಾಗಲೂ ದೂರನ್ನು ದಾಖಲಿಸಿದ್ದರೆ ಅದಕ್ಕೆ ಸಂಬಂದಪಟ್ಟ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸುತ್ತಿದ್ದೆನು ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಎರಡನೇ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ತುಮಕೂರು